Legislative enactment in respect of service conditions of N.G.Os.

117. Sri B. V. KAKKILAYA [on behalf of SRI M. S. KRISHNAN (Malleswaram)].—

Will the Chief Minister be pleased to state :—

(*a*) whether the N.G.Os. of the State through their Organisation, the Mysore State Government Employees' Association, have requested the Government for Legislative enanctment in respect of their service conditions, if so, when ;

(*b*) whether they have considered the request of the Association ;

(*c*) if so, the decision taken by the Government on N.G.Os'. requests ?

Sri D. DEVARAJ URS (Chief Minister).—

(*a*) Yes, in February 1970.

(*b*) and (*c*) The matter is under consideration.

ಶ್ರೀ ಬಿ. ವಿ. ಕಕ್ಕಿಲಾಯ.—ಸರ್ಕಾರದ ನೌಕರರ ಮನವಿ ಸರ್ಕಾರಕ್ಕೆ 1970ನೇ ಫೆಬ್ರುವರಿ ಮಾಹೆಯಲ್ಲಿ ಬಂದಿದೆಯೆಂದು ಹೇಳಿದ್ದೀರಿ. ಆಗ ಮಾನ್ಯ ಶ್ರೀ ವೀರೇಂದ್ರ ಪಾಟೀಲರ ಸರ್ಕಾರ ಇತ್ತು. ಅವರು ಬಿಟ್ಟು ಹೋದಾಗ ಅವರ ಕೋರಿಕೆಗಳು ಪರಿಶೀಲನೆಯಲ್ಲಿತ್ತು ಎಂಬ ಒಂದು ಘಟ್ಟದಲ್ಲಿತ್ತು. ರಾಷ್ಟ್ರಾಧ್ಯಕ್ಷರ ಆಳ್ವಿಕೆ ಮುಗಿದಾದಮೇಲೆ ತಮ್ಮ ಆಡಳಿತದಲ್ಲಿ ಆ ವಿಚಾರ ಯಾವ ಘಟ್ಟಕ್ಕೆ ತಲುಪಿದೆ ?

†ಶ್ರೀ ಡಿ. ದೇವರಾಜ್ ಅರಸ್.—ಇವರ ಬಗ್ಗೆ ಹಿಂದಿನ ಸರ್ಕಾರದವರು ಒಂದು ಬಿಲ್ಲನ್ನು ಇಂಟ್ರಡ್ಯೂಸ್ ಮಾಡಿದ್ದರೆಂದು ಗೊತ್ತಾಗಿದೆ. ಅದು ರಾಜ್ಯಪಾಲರ ಕಾಲದಲ್ಲಿ ಲ್ಯಾಪ್ಸ್ ಆಯಿತು. ತದನಂತರ ನನ್ನ ಮುಂದೆ ಈಗ ಬಂದಿದೆ. ಇದನ್ನು ಇನ್ನೂ ಪರಿಶೀಲನೆ ಮಾಡಬೇಕಾಗಿದೆಯೆಂದು ನಾನು ಹೇಳುತ್ತೇನೆ.

ಶ್ರೀ ಎಚ್. ಎಸ್. ಸಿದ್ಧಪ್ಪ.—ನ್ಯಾಚುರಲ್ ಕೆರಾಮಿಟೀಸ್ ಆಗದಿದ್ದರೆ ರೈತರ ಕಷ್ಟಗಳು ಏನೇ ಇದ್ದರೂ ಎನ್. ಜಿ. ಓ. ಗಳಿಗೆ ಮಾಮೂಲಾಗಿ ತಪ್ಪದೆ ಪ್ರತಿ ತಿಂಗಳೂ ಒಂದನೇ ತಾರೀಖು ಸಂಬಳ ಕೊಡುತ್ತೀರಲ್ಲವೇ ?

ಶ್ರೀ ಡಿ. ದೇವರಾಜ್ ಅರಸ್.—ಕೆರಾಮಿಟೀಸ್ ಬರಲಿ, ಬಾರದಿರಲಿ, ಅವರಿಗೆ ಕೊಡತಕ್ಕ ಸಂಬಳವನ್ನು ಅವರಿಗೆ ಕೊಡಲೇ ಬೇಕು.

ಶ್ರೀ ಕೋಣಂದೂರು ಲಿಂಗಪ್ಪ.—ಇವತ್ತು ಎಲ್ಲಾ ಆಹಾರಧಾನ್ಯಗಳ ಬೆಲೆ ಗಗನಕ್ಕೆ ಮುಟ್ಟುತ್ತಿದೆ. ಅಂಥಾದ್ದರಲ್ಲಿ ಕೇವಲ 7—8 ರೂಪಾಯಿಗಳನ್ನು ಮಾತ್ರ ತುಟ್ಟಿಭತ್ಯ ಈಗ ಹೆಚ್ಚಿಗೆ ಕೊಟ್ಟಿದ್ದೀರಿ. ನಮ್ಮ ರಾಜ್ಯ ಸರ್ಕಾರದ ನೌಕರರ ಸಂಬಳಸಾರಿಗೆ ಹಾಗೂ ತುಟ್ಟಿಭತ್ಯವನ್ನು ಕೇಂದ್ರಸರ್ಕಾರದ ನೌಕರರ ಮಟ್ಟಕ್ಕೆ ತರಬೇಕು. ಅವರ ಜೀವನಮಟ್ಟಕ್ಕೆ ಸರಿಯಾಗಿ ಅನುಕೂಲಗಳನ್ನು ಒದಗಿಸಬೇಕು. ಆದ್ದರಿಂದ ಅಧಿವೇಶನ ಮುಗಿಯುವುದರೊಳಗೆ ಅವರ ಸೇವಾ ಷರತ್ತುಗಳನ್ನು ಪರಿಶೀಲಿಸಿ ಒಂದು ಕಾಯಿದೆಯನ್ನು ಈ ಸಭೆಯ ಮುಂದೆ ತೆಗೆದುಕೊಂಡು ಬರುತ್ತೀರಾ ?

ಶ್ರೀ ಡಿ. ದೇವರಾಜ್ ಅರಸ್.—ನಾನು ಅದನ್ನು ಇಲ್ಲಿ ತರುತ್ತಾ ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಅದನ್ನು ಇನ್ನೂ ಪರಿಶೀಲನೆಮಾಡುತ್ತಿದ್ದೇವೆ. ಆದರೆ ಇದನ್ನು ಯಾವಾಗ ಎಷ್ಟು ಕಾಲದೊಳಗೆ ಇಲ್ಲಿ ತರುತ್ತೀರಾ ಎಂಬುದಾಗಿ ಕೇಳಿದರೆ, ಅದನ್ನು ಹೇಳುವುದಕ್ಕೆ ಸ್ವಲ್ಪ ಮಟ್ಟಿಗೆ ತ್ರಾಸಾಗುತ್ತದೆ. ಏಕೆಂದರೆ ಇದು ಸುಮಾರು 25 ವರ್ಷಗಳಿಂದಲೂ ಹಾಗೆಯೇ ಇದೆ. ಇದನ್ನು ಜಾರಿಗೆ ತರುವುದರಿಂದ ಹೊಸದಾಗಿ ಏನಾದರೂ ಬದಲಾವಣೆಗಳು ಆಗುತ್ತವೆಯೇ ಇಲ್ಲವೇ ಎಂಬುದು ನನ್ನ ಮನಸ್ಸಿಗೆ ಇನ್ನೂ ಬಂದಿಲ್ಲ. ನನ್ನ ಮನಸ್ಸಿಗೆ ಇದರ ಬಗ್ಗೆ ಪೂರ್ಣ ವಿಶ್ವಾಸ ಬಂದು ಇದನ್ನು ತರುವುದರಿಂದ ಮತ್ತೆ ಬೇರೆ ಅನುಕೂಲಗಳು ಆಗುತ್ತವೆ ಎಂಬುದಾಗಿ ಕಂಡು ಬಂದರೆ ಅದನ್ನು ಯೋಚನೆ ಮಾಡೋಣ.

ಶ್ರೀ ಜಿ. ಎನ್. ಪಾಟೀಲ್.—ಹೊಸ ಶಾಸನದ ಮೂಲಕ ಅವರ ಸೇವಾ ಷರತ್ತುಗಳನ್ನು ಪರಿಪಡಿಸುವ ದೃಷ್ಟಿಯಿಂದ ತಕ್ಕ ಕ್ರಮ ಕೈಗೊಳ್ಳುವುದಕ್ಕೆ ಇನ್ನೆಷ್ಟು ಕಾಲ ಬೇಕು ?

ಶ್ರೀ ಡಿ. ದೇವರಾಜ್ ಅರಸ್.—ನಾನು ಇದನ್ನು ಸ್ವಲ್ಪ ಸ್ಪಷ್ಟವಾಗಿ ತಿಳಿಸಿದರೆ ಮಾನ್ಯ ಸದಸ್ಯರು ಒಪ್ಪಬಹುದು. ಕಾನ್‌ಸ್ಟಿಟ್ಯೂಷನ್ ಆರ್ಟಿಕಲ್ 307ರ ಪ್ರಕಾರ ಸರ್ಕಾರದ ನೌಕರರ ಸರ್ವಿಸ್ ಕಂಡೀಷನ್‌ಗಳನ್ನು ರೆಗ್ಯುಲೇಟ್ ಮಾಡುವುದಕ್ಕೆ ಎರಡು ವಿಧಾನಗಳನ್ನು ಅದರಲ್ಲಿ ನಮೂದಿಸಿದ್ದಾರೆ. ಒಂದು ಆಕ್ಟ್ ಮಾಡಿ ರೂಲ್ಸ್ ಮಾಡತಕ್ಕದ್ದು. ಮತ್ತೊಂದು ವಿಧಾನ ರಾಜ್ಯಪಾಲರೇ ನೇರವಾಗಿ ರೂಲ್ಸ್ ಮಾಡುವ ಅಧಿಕಾರವನ್ನು ಪಡೆದಿರತಕ್ಕದ್ದು. 25 ವರ್ಷಗಳಿಂದಲೂ ಅದರಲ್ಲೂ ಕಾನ್‌ಸ್ಟಿಟ್ಯೂಷನ್ ಜಾರಿಗೆ ಬಂದ ದಿವಸದಿಂದಲೂ ರಾಜ್ಯ ಪಾಲರೇ ಇದಕ್ಕೆಂತಾ ರೂಲ್ಸ್ ಫ್ರೇಂ ಮಾಡಿ ಆದರಂತೆ ಸರ್ವಿಸ್ ಕಂಡೀಷನ್ಸ್ ಹಾಕಿಕೊಂಡು ಬಂದಿದ್ದಾರೆ. ಈಗ ಒಂದು ಬಿಲ್ ಅದರ ಬಗ್ಗೆ ಇಲ್ಲಿ ತರಬೇಕೆಂದು ಹೇಳಿರುವ ಬಗ್ಗೆ ನನ್ನ ಕಾಮೆಂಟ್ಸ್ ಏನೂ ಇಲ್ಲ. ಅದು ಲ್ಯಾಪ್ಸ್ ಆಗಿರುವುದೂ ಸಹ ಸ್ವಲ್ಪಮಟ್ಟಿಗೆ ಗೊತ್ತಿದೆ. ಈಗ ನನ್ನ ಮುಂದೆ ಇದು ಬಂದು ನನಗೆ ಪೂರ್ಣವಾಗಿ ಮನವರಿಕೆಯಾಗಿರುವ ವಿಚಾರವಾಗಿದೆ. ಆದರೆ ಇದುವರೆಗೆ ಬಂದಿರುವ ರೀತಿನೀತಿಗಳನ್ನು ಬದಲಾವಣೆ ಮಾಡುವುದಕ್ಕೆ ಕಾರಣಗಳು ಇನ್ನೂ ಕಂಡುಬಂದಿಲ್ಲ. ಅದನ್ನು ಸರ್ಕಾರದವರು ಪರಿಶೀಲಿಸುತ್ತಿದ್ದಾರೆಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ.

Sri C. M. ARUMUGAM —I wish to know whether the N. G. Os. Association have, in a memorandum, urged that their present service conditions should be altered ?

Sri D. DEVARAJ URS.—The N. G. Os. now and then will be making suggestions and representations on certain matters.

Sri C. M. ARUMUGAM.—The Chief Minister was pleased to say that the matter was under considertation. The N. G. Os. have also given a memorandum. What are the difficulties represented by them and what are their suggestions to remedy them ? Just because the matter is pending for 25 years, that is no reason for Governmemt to allow it to continue without a decision endlessly. The N. G. Os. want an enactment in respect of their conditions. What are the suggestions made by them in that regard ?

Sri D. DEVARAJ URS.—At the moment I am not aware of the suggestions made by the N. G. Os. in regard to an enactment. I will look into them.

Sri H. S. SIDDAPPA.—Has it come to the notice of the Government that as the Government goes on giving enhanced salaries and D. As to the N. G. Os, the rates of consumer goods also go on increasing ?

Sri D. DEVARAJ URS.—That is before the Government.

MADAM SPEAKER.—Now questions are over.

QUESTION FOR ANSWER ON THE DAY
(but not taken up)

Powers of Transfer of Teachers

161. Sri MOHAMED ALI (Gulbarga).—

Will the Minister for Education be pleased to state :—

whether the powers of transfer of Primary School Teachers vest with the Director of Public Instruction and the powers of transfer of Graduate Teachers vest with the Joint Director of Public Instruction of the Division concerned;